ಕರ್ನಾಟಕ ಸರ್ಕಾರ

ಕರ್ನಾಟಕ ಅಧಿನಿಯಮ, 1964ರ ಸಂಖ್ಯೆ 25

# ಕರ್ನಾಟಕ ಬಂದಿಗಳ ಅಧಿನಿಯಮ, 1963

(25 ಜೂನ್ 1964ರಂದು ಜಾರಿಯಲ್ಲಿದ್ದಂತೆ)

**ಕರ್ನಾಟಕ ಅಧಿನಿಯಮ, 1964ರ ಸಂಖ್ಯೆ 25**

# ಕರ್ನಾಟಕ ಬಂದಿಗಳ ಅಧಿನಿಯಮ, 1963

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ನಂ. ಲಾ 26 ಎಲ್ ಎಂ ಪಿ 89 ಬೆಂಗಳೂರು, ದಿನಾಂಕ 26ನೇ ಜೂನ್ 1989**

ಕರ್ನಾಟಕ ರಾಜ ಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ, 26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಶ್ರೀ ಪಿ. ವೆಂಕಟಸುಬ್ಬಯ್ಯ ಎಂಬ ನಾನು ಕರ್ನಾಟಕ ಬಂದಿಗಳ ಅಧಿನಿಯಮ 1963ರ (ಕರ್ನಾಟಕ ಅಧಿನಿಯಮ, 1964ರ ಸಂಖ್ಯೆ 25) ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಪಿ. ವೆಂಕಟಸುಬ್ಬಯ್ಯ**
ಕರ್ನಾಟಕ ರಾಜ್ಯಪಾಲರು

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಪ್ರಕಟಣೆಗಳು).

## ಕರ್ನಾಟಕ ಬಂದಿಗಳ ಅಧಿನಿಯಮ, 1963

### ಪ್ರಕರಣಗಳ ಅನುಕ್ರಮಣಿಕೆ


| ಪ್ರಕರಣಗಳು | ಪ್ರಸ್ತಾವನೆ | ಪುಟಗಳು |
|---|---|---|
| 1 | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 1 |
| 2 | ಪರಿಭಾಷೆಗಳು | 1 |
| 3 | ಕಾರಾಗೃಹಗಳ ಪ್ರಭಾರದಲ್ಲಿರುವ ಅಧಿಕಾರಿಗಳು ಅವರ ಅಭಿರಕ್ಷೆಗೆ ಕ್ರಮಬದ್ಧವಾಗಿ ಒಪ್ಪಿಸಿದ ವ್ಯಕ್ತಿಗಳನ್ನು ಬಂದಿಸಿಡುವುದು | 2 |
| 4 | ಕಾರಾಗೃಹಗಳ ಪ್ರಭಾರದಲ್ಲಿರುವ ಅಧಿಕಾರಿಗಳು ಜಾರಿ ಅಥವಾ ವಿಮೋಚನೆಯ ತರುವಾಯ ರಿಟ್‌ಗಳು ಇತ್ಯಾದಿಗಳನ್ನು ವಾಪಸ್ಸು ಮಾಡತಕ್ಕದ್ದು. | 2 |
| 5 | ಕೆಲವು ನ್ಯಾಯಾಲಯಗಳ ಶಿಕ್ಷೆಯ ಆದೇಶಗಳನ್ನು ಜಾರಿಗೊಳಿಸಲು ಕಾರಾಗೃಹಗಳ ಪ್ರಭಾರದಲ್ಲಿರುವ ಅಧಿಕಾರಿಗಳ ಅಧಿಕಾರ | 2 |
| 6 | ಅಂಥ ನ್ಯಾಯಾಲಯದ ಅಧಿಕಾರಿಯ ವಾರಂಟು ಸಾಕಷ್ಟು ಅಧಿಕಾರವಾಗಿರತಕ್ಕದ್ದು | 2 |
| 7 | ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಯು ಜಾರಿಗಾಗಿ ಅವನಿಗೆ ಕಳುಹಿಸಿದ ವಾರಂಟಿನ ಕಾನೂನುಬದ್ಧತೆಯ ಬಗ್ಗೆ ಸಂದೇಹಪಡುವಲ್ಲಿ ಪ್ರಕ್ರಿಯೆ | 2 |
| 8 | ಬಂದಿಗಳ ಸ್ಥಳಾಂತರ | 3 |
| 9 | ಮನೋವಿಕಲ ಬಂದಿಗಳೊಂದಿಗೆ ಹೇಗೆ ವ್ಯವರಿಸತಕ್ಕದ್ದು | 3 |
| 10 | ಆಜೀವ ಕಾರಾವಾಸದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿಗಳ ಬಂಧನಕ್ಕಾಗಿ ಸ್ಥಳಗಳನ್ನು ಗೊತ್ತುಪಡಿಸುವುದು ಮತ್ತು ಅಲ್ಲಿಗೆ ಸ್ಥಳಾಂತರಣ | 4 |
| 11 | ಕ್ಷಮಿಸುವುದಕ್ಕಾಗಿ ಶಿಫಾರಸ್ಸು ಮಾಡಿದ ಬಂದಿಯನ್ನು ಉಚ್ಚ ನ್ಯಾಯಾಲಯದ ಆದೇಶದ ಮೂಲಕ ಮುಚ್ಚಳಿಕೆಯ ಮೇಲೆ ಬಿಡುಗಡೆ | 5 |
| 12 | ನಿರಸನ ಮತ್ತು ಉಳಿಸುವಿಕೆಗಳು | 5 |

## ಕರ್ನಾಟಕ ಅಧಿನಿಯಮ, 1964ರ ಸಂಖ್ಯೆ 25

(1964ರ ಜೂನ್ ಇಪ್ಪತ್ತೈದನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು)

## ಕರ್ನಾಟಕ ಬಂದಿಗಳ ಅಧಿನಿಯಮ, 1963

(1964ರ ಮೇ ಹದಿನಾಲ್ಕನೇ ದಿವಸದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ನ್ಯಾಯಾಲಯದ ಆದೇಶದ ಮೂಲಕ ಬಂದಿಸಿಡಲಾದ ಬಂದಿಗಳಿಗೆ ಸಂಬಂಧಪಟ್ಟ ಕೆಲವು ಉಪಬಂಧಗಳನ್ನು ಮಾಡುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ನ್ಯಾಯಾಲಯದ ಆದೇಶದ ಮೂಲಕ ಬಂಧಿಸಿಡಲಾದ ಬಂದಿಗಳಿಗೆ ಸಂಬಂಧಪಟ್ಟ ಕೆಲವು ಉಪಬಂಧಗಳನ್ನು ಮಾಡುವುದು ವಿಹಿತವಾಗಿರುವುದರಿಂದ ;

ಭಾರತ ಗಣರಾಜ್ಯದ ಹದಿನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಬಂದಿಗಳ ಅಧಿನಿಯಮ, 1963 ಎಂದು ಕರೆಯತಕ್ಕದ್ದು.

2. ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

3. ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) **"ನ್ಯಾಯಾಲಯ"** ಎಂಬುದು ಸಿವಿಲ್, ಕ್ರಿಮಿನಲ್ ಅಥವಾ ರೆವಿನ್ಯೂ ಅಧಿಕಾರ ವ್ಯಾಪ್ತಿಯನ್ನು ಕಾನೂನುಬದ್ಧವಾಗಿ ಚಲಾಯಿಸುವ ಯಾವನೇ ಅಧಿಕಾರಿಯನ್ನು ಒಳಗೊಳ್ಳುತ್ತದೆ ;

(ಖ) **"ಅಧಿಸೂಚನೆ"** ಎಂದರೆ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ;

(ಗ) **"ಕಾರಾಗೃಹ"** ಎಂಬುದು ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸಹಾಯಕ ಜೈಲು ಎಂದು ಘೋಷಿಸಲಾಗಿರುವಂಥ ಯಾವುದೇ ಸ್ಥಳವನ್ನು ಒಳಗೊಳ್ಳುತ್ತದೆ.

(2) 5 ರಿಂದ 9ನೇ ಪ್ರಕರಣಗಳಲ್ಲಿ (ಎರಡೂ ಸೇರಿ) ಕಾರಾಗೃಹಗಳು ಅಥವಾ ಕಾರಾವಾಸ ಅಥವಾ ಬಂಧನಗಳಿಗೆ ಮಾಡಿದ ಉಲ್ಲೇಖಗಳನ್ನು, ಸುಧಾರಣಾಲಯಗಳು, ಬೋರ್ಸ್ಟಲ್ ಸಂಸ್ಥೆಗಳು, ಕಿರಿಯ ಮತ್ತು ಹಿರಿಯ ಪ್ರಮಾಣಿತ ಶಾಲೆಗಳು ಮತ್ತು ಅಂಥದೇ ಸ್ವರೂಪದ ಇತರ ಸಂಸ್ಥೆಗಳು ಅಥವಾ ಅದರಲ್ಲಿನ ಬಂಧನಗಳಿಗೂ ಸಹ ಉಲ್ಲೇಖವಾಗುವುದೆಂದು ಅರ್ಥೈಸತಕ್ಕದ್ದು.

**3. ಕಾರಾಗೃಹಗಳ ಪ್ರಭಾರದಲ್ಲಿರುವ ಅಧಿಕಾರಿಗಳು ಅದರ ಅಭಿರಕ್ಷೆಗೆ ಕ್ರಮಬದ್ಧವಾಗಿ ಒಪ್ಪಿಸಿದ ವ್ಯಕ್ತಿಗಳನ್ನು ಬಂಧಿಸಿಡುವುದು.–**

ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಅಥವಾ ಅನ್ಯಥಾ ಯಾವ ರಿಟ್, ವಾರೆಂಟು ಅಥವಾ ಆದೇಶದ ಮೂಲಕ ಅಂತಹ ವ್ಯಕ್ತಿಯನ್ನು ಒಪ್ಪಿಸಲಾಗಿದೆಯೋ ಆ ಯಾವುದೇ ರಿಟ್, ವಾರೆಂಟು ಅಥವಾ ಆದೇಶದ ಜರೂರು ಅವಶ್ಯಕತೆಗನುಸಾರವಾಗಿ ಯಾವುದೇ ನ್ಯಾಯಾಲಯವು ಅವನ ಅಭಿರಕ್ಷೆಗೆ ಕ್ರಮಬದ್ಧವಾಗಿ ಒಪ್ಪಿಸಿದ ಎಲ್ಲಾ ವ್ಯಕ್ತಿಗಳನ್ನು ಕಾನೂನಿನ ಯುಕ್ತ ಕ್ರಮದಲ್ಲಿ ವಿಮೋಚನೆಗೊಳಿಸುವ ಅಥವಾ ಸ್ಥಳಾಂತರಿಸುವವರೆಗೆ ಸ್ವೀಕರಿಸತಕ್ಕದ್ದು ಮತ್ತು ಬಂಧಿಸಿಡತಕ್ಕದ್ದು ;

**4. ಕಾರಾಗೃಹಗಳಿಗೆ ಪ್ರಭಾರದಲ್ಲಿರುವ ಅಧಿಕಾರಿಗಳು, ಜಾರಿ ಅಥವಾ ವಿಮೋಚನೆಯ ತರುವಾಯ, ರಿಟ್ಟುಗಳು ಇತ್ಯಾದಿಗಳನ್ನು ವಾಪಸ್ಸು ಮಾಡತಕ್ಕದ್ದು .–**

ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಯು, ಅಧಿವಿಚಾರಣೆಗಾಗಿ ಒಪ್ಪಿಸುವಿಕೆಯ ವಾರೆಂಟನ್ನು ಹೊರತುಪಡಿಸಿ ಹಿಂದೆ ಹೇಳಿದಂಥ ಪ್ರತಿಯೊಂದು ಅಂಥ ರಿಟ್, ವಾರೆಂಟು ಅಥವಾ ಆದೇಶವನ್ನು ಜಾರಿಗೊಳಿಸಿದ ತರುವಾಯ, ಅಥವಾ ಅದರ ಮೂಲಕ ಒಪ್ಪಿಸಿದ ವಿಮೋಚನೆಯ ತರುವಾಯ, ತಕ್ಷಣವೇ ಅಂಥ ರಿಟ್ಟು, ವಾರೆಂಟು ಅಥವಾ ಆದೇಶವನ್ನು ಅದನ್ನು ಹೇಗೆ ಜಾರಿಗೊಳಿಸಲಾಯಿತು ಅಥವಾ ಅದರ ಮೂಲಕ ಒಪ್ಪಿಸಿದ ವ್ಯಕ್ತಿಯನ್ನು ಅದನ್ನು ಅದರ ಜಾರಿಗೆ ಮುಂಚೆ ಅಭಿರಕ್ಷೆಯಿಂದ ಏಕೆ ವಿಮೋಚನೆಗೊಳಿಸಲಾಯಿತು ಎಂಬುದನ್ನು ತೋರಿಸಿ ಅದರ ಮೇಲೆ ಹಿಂಬರಹ ಮಾಡಿದ ಮತ್ತು ಅವನು ರುಜುಮಾಡಿದ ಪ್ರಮಾಣಪತ್ರದೊಡನೆ ಅದನ್ನು ಹೊರಡಿಸಿದ ಅಥವಾ ಮಾಡಿದ ನ್ಯಾಯಾಲಯಕ್ಕೆ ವಾಪಸ್ಸು ಮಾಡತಕ್ಕದ್ದು.

**5. ಕೆಲವು ನ್ಯಾಯಾಲಯಗಳ ಶಿಕ್ಷೆಯ ಆದೇಶಗಳನ್ನು ಜಾರಿಗೊಳಿಸಲು ಕಾರಾಗೃಹಗಳ ಪ್ರಭಾರದಲ್ಲಿರುವ, ಅಧಿಕಾರಿಗಳ ಅಧಿಕಾರ .–**

ರಾಜ್ಯದಲ್ಲಿನ ಕಾರಾಗೃಹಗಳ ಪ್ರಭಾರದಲ್ಲಿರುವ ಅಧಿಕಾರಿಗಳು ಕೇಂದ್ರ ಸರ್ಕಾರದ ಅಥವಾ ಭಾರತದಲ್ಲಿನ ಯಾವುದೇ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಅಧಿಕಾರದ ಮೇರೆಗೆ ರಾಜ್ಯದೊಳಗಡೆ ಅಥವಾ ಹೊರಗಡೆಯಾಗಲಿ ಕಾರ್ಯ ನಿರ್ವಹಿಸುತ್ತಿರುವ ಅಥವಾ ನ್ಯಾಯಾಧಿಕರಣವು ಮಾಡಿದ ಅಥವಾ ಹೊರಡಿಸಿದ ಯಾವನೇ ವ್ಯಕ್ತಿಯ ಬಂಧನಕ್ಕಾಗಿನ ಯಾವುದೇ ಶಿಕ್ಷೆಯ ಆದೇಶ ಅಥವಾ ವಾರೆಂಟು ಅಥವಾ ಆದೇಶವನ್ನು ಜಾರಿಗೊಳಿಸಬಹುದು.

**6. ಅಂಥ ನ್ಯಾಯಾಲಯದ ಅಧಿಕಾರಿಯ ವಾರೆಂಟು ಸಾಕಷ್ಟು ಅಧಿಕಾರವಾಗಿರತಕ್ಕದ್ದು.–**

6ನೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವಂಥ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಅಧಿಕಾರಿಯ ಅಧಿಕೃತ ರುಜುವಿನ ಮೇರೆಗಿನ ವಾರಂಟು ಯಾವನೇ ವ್ಯಕ್ತಿಯನ್ನು

ಬಂಧನದಲ್ಲಿಟ್ಟುಕೊಳ್ಳುವುದಕ್ಕಾಗಿ ಅಥವಾ ಅವನ ಮೇಲೆ ವಿಧಿಸಿದ ಶಿಕ್ಷೆಯ ಅನುಸರಣೆಯಲ್ಲಿ ಆಜೀವ ಕಾರಾವಾಸಕ್ಕಾಗಿ ಯಾವನೇ ವ್ಯಕ್ತಿಯನ್ನು ಕಳುಹಿಸುವುದಕ್ಕಾಗಿ ಸಾಕಷ್ಟು ಅಧಿಕಾರವಾಗಿರತಕ್ಕದ್ದು.

**7. ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಯು, ಜಾರಿಗಾಗಿ ಅವನಿಗೆ ಕಳುಹಿಸಿದ ವಾರಂಟಿನ ಕಾನೂನು ಬದ್ಧತೆಯ ಬಗ್ಗೆ ಸಂದೇಹ ಪಡುವಲ್ಲಿ ಪ್ರಕ್ರಿಯೆ :–**

(1) ಜಾರಿಗಾಗಿ ಅವನಿಗೆ ಕಳುಹಿಸಿದ ವಾರಂಟು ಅಥವಾ ಆದೇಶದ ಕಾನೂನು ಬದ್ಧತೆಯ ಬಗ್ಗೆ ಅಥವಾ ಅದಕ್ಕೆ ಯಾರ ಅಧಿಕೃತ ಮೊಹರು ಅಥವಾ ರುಜುವನ್ನು ಹಾಕಲಾಗಿದೆಯೋ ಆ ವ್ಯಕ್ತಿಯು ಶಿಕ್ಷೆಯನ್ನು ವಿಧಿಸಲು ಮತ್ತು ವಾರಂಟು ಅಥವಾ ಆದೇಶವನ್ನು ಹೊರಡಿಸಲು ಆ ವ್ಯಕ್ತಿಯ ಸಕ್ಷಮತೆಯ ಬಗ್ಗೆ ಸಂದೇಹ ಪಡುವಲ್ಲಿ ಅವನು ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಅಂಥ ಒಪ್ಪಿಸುವಿಕೆಯ ಮೇಲೆ ರಾಜ್ಯ ಸರ್ಕಾರವು ಮಾಡಬಹುದಾದಂಥ ಆದೇಶಕ್ಕನುಸಾರವಾಗಿ ಆ ಬಂದಿಯೊಂದಿಗೆ ವ್ಯವಹರಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಒಪ್ಪಿಸುವಿಕೆಯ ಮೇಲಿನ ಆದೇಶಗಳು ಆಗುವವರೆಗೆ ಆ ಬಂದಿಯನ್ನು ವಾರಂಟು ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಪರಿಬಂಧಗಳು ಮತ್ತು ಕಡಿಮೆ ಮಾಡುವಿಕೆಗಳೊಂದಿಗೆ ಬಂದಿಯನ್ನು ಬಂಧಿಸಿಡತಕ್ಕದ್ದು.

**8. ಬಂದಿಗಳ ಸ್ಥಳಾಂತರ.–** (1) ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ.–

(ಕ) ಮರಣದಂಡನೆ ಶಿಕ್ಷೆಯ ಆದೇಶದ ಮೇರೆಗೆ ; ಅಥವಾ

(ಖ) ಆಜೀವ ಕಾರಾವಾಸದ ಶಿಕ್ಷೆಯ ಆದೇಶದ ಮೇರೆಗೆ ಅಥವಾ ಅದಕ್ಕೆ ಬದಲಾಗಿ ;

(ಗ) ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ ; ಅಥವಾ

(ಘ) ಶಾಂತಿ ಪಾಲನೆಗೆ ಅಥವಾ ಸದ್ವರ್ತನೆಯನ್ನು ಪಾಲಿಸುವುದಕ್ಕಾಗಿ ಭದ್ರತೆಯನ್ನು ಕೊಡಲು ತಪ್ಪಿದಲ್ಲಿ

– ಕಾರಾಗೃಹದಲ್ಲಿ ಬಂಧಿಸಿಟ್ಟ ಯಾವನೇ ವ್ಯಕ್ತಿಯನ್ನು ಕರ್ನಾಟಕ ರಾಜ್ಯದಲ್ಲಿನ ಯಾವುದೇ ಇತರ ಕಾರಾಗೃಹಕ್ಕೆ ಸ್ಥಳಾಂತರಿಸುವುದಕ್ಕಾಗಿ ವ್ಯವಸ್ಥೆ ಮಾಡಬಹುದು.

(2) ರಾಜ್ಯ ಸರ್ಕಾರದ ಆದೇಶಗಳಿಗೆ ಒಳಪಟ್ಟು ಮತ್ತು ಅದರ ನಿಯಂತ್ರಣದ ಮೇರೆಗೆ ಕಾರಾಗೃಹಗಳ ಇನ್ಸ್‌ಪೆಕ್ಟರ್ ಜನರಲ್‌ನು ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾರಾಗೃಹದಲ್ಲಿ ಹಿಂದೆ ಹೇಳಿದಂತೆ ಬಂಧಿಸಿಟ್ಟ ಯಾವನೇ ಬಂಧಿಯನ್ನು ರಾಜ್ಯದಲ್ಲಿನ ಯಾವುದೇ ಇತರ ಕಾರಾಗೃಹಕ್ಕೆ ಸ್ಥಳಾಂತರಿಸುವುದಕ್ಕಾಗಿ ವ್ಯವಸ್ಥೆ ಮಾಡಬಹುದು.

**9. ಮನೋವಿಕಲ ಬಂದಿಗಳೊಂದಿಗೆ ಹೇಗೆ ವ್ಯವಹರಿಸತಕ್ಕದ್ದು.–** (1) ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ಶಿಕ್ಷೆಯ ಆದೇಶದ ಮೇರೆಗೆ ಯಾವನೇ ವ್ಯಕ್ತಿಯನ್ನು ಬಂಧಿಸಿಟ್ಟ ಅಥವಾ ಕಾರಾವಾಸದಲ್ಲಿಟ್ಟ ಯಾವನೇ ವ್ಯಕ್ತಿಯು ಅಸ್ವಸ್ಥ ಚಿತ್ತನಾಗಿರುವನೆಂದು ರಾಜ್ಯ ಸರ್ಕಾರಕ್ಕೆ ಕಂಡುಬರುವಲ್ಲಿ, ರಾಜ್ಯ ಸರ್ಕಾರವು ಆ ವ್ಯಕ್ತಿಯು ಅಸ್ವಸ್ಥಚಿತ್ತನಾಗಿರುವನೆಂಬ ನಂಬಿಕೆಯ ಕಾರಣಗಳನ್ನು ನಮೂದಿಸಿ ವಾರಂಟಿನ ಮೂಲಕ ಮಾನಸಿಕ ರೋಗಿಗಳ ಆಸ್ಪತ್ರೆ ಅಥವಾ ಕರ್ನಾಟಕ ರಾಜ್ಯದೊಳಗಿನ ಸುರಕ್ಷಿತ ಅಭಿರಕ್ಷೆಯ ಇತರ ಸ್ಥಳಕ್ಕೆ ಅವನನ್ನು ಸ್ಥಳಾಂತರಿಸಲು ಯಾವ ಅವಧಿಗಾಗಿ ಅವನನ್ನು ಬಂಧಿಸಿಡಲು ಅಥವಾ ಕಾರಾವಾಸದಲ್ಲಿಡಲು ಆದೇಶಿಸಲಾಗಿದೆಯೋ ಅಥವಾ ಶಿಕ್ಷಿಸಲಾಗಿದೆಯೋ ಆ ಅವಧಿಯ ಉಳಿದ ಅವಧಿಯಲ್ಲಿ ರಾಜ್ಯ ಸರ್ಕಾರವು ನಿರ್ದೇಶಿಸಿದಲ್ಲಿ ಅಥವಾ ಆ ಅವಧಿಯು ಮುಕ್ತಾಯವಾದ ಮೇಲೆ ಬಂದಿಯ ಅಥವಾ ಇತರರ ಸುರಕ್ಷತೆಗಾಗಿ ಅವನನ್ನು ವೈದ್ಯಕೀಯ ರಕ್ಷಣೆ ಅಥವಾ ಉಪಚಾರದಲ್ಲಿ ಮತ್ತು ಬಂಧಿಸಿಡುವುದು ಅವಶ್ಯಕವೆಂದು ವೈದ್ಯಾಧಿಕಾರಿಯು ಪ್ರಮಾಣೀಕರಿಸಿದರೆ, ಆಗ ಅವನನ್ನು ಕಾನೂನಿಗನುಸಾರವಾಗಿ ವಿಮೋಚನೆಗೊಳಿಸುವವರೆಗೆ ಅಲ್ಲಿ ಇಡಲು ಮತ್ತು ಚಿಕಿತ್ಸೆಗೆ ಒಳಪಡಿಸಲು ಆದೇಶಿಸಬಹುದು.

(2) ಬಂದಿಯು ಸ್ವಸ್ಥಚಿತ್ತನಾಗಿರುವನೆಂದು ರಾಜ್ಯ ಸರ್ಕಾರಕ್ಕೆ ಕಂಡುಬರುವಲ್ಲಿ ರಾಜ್ಯ ಸರ್ಕಾರವು ಅಭಿರಕ್ಷೆಯಲ್ಲಿಟ್ಟಿರಲು ಇನ್ನು ಗುರಿಯಾಗಿದ್ದರೆ ಬಂದಿಯ ಪ್ರಭಾರವನ್ನು ಹೊಂದಿರುವ ವ್ಯಕ್ತಿಗೆ ನಿರ್ದೇಶಿಸಿದ ವಾರಂಟಿನ ಮೂಲಕ ಅವನನ್ನು ಸ್ಥಳಾಂತರಿಸಲಾದಂಥ ಕಾರಾಗೃಹಕ್ಕೆ ಅಥವಾ ಕರ್ನಾಟಕ ರಾಜ್ಯದೊಳಗೆ ಯಾವುದೇ ಇತರ ಕಾರಾಗೃಹಕ್ಕೆ ಅವನನ್ನು ಬಂಧನಕ್ಕೆ ಕಳುಹಿಸತಕ್ಕದ್ದು ಅಥವಾ ಬಂದಿಯು ಅಭಿರಕ್ಷೆಯಲ್ಲಿಟ್ಟಿರಲು ಇನ್ನು ಗುರಿಯಾಗಿಲ್ಲದಿದ್ದರೆ, ಅವನನ್ನು ವಿಮೋಚನೆಗೊಳಿಸಲು ಆದೇಶಿಸತಕ್ಕದ್ದು.

(3) ಭಾರತ ಮನೋವಿಕಲತೆ ಅಧಿನಿಯಮ, 1912 (ಕೇಂದ್ರ ಅಧಿನಿಯಮ, 1912 IV)ದ ಉಪಬಂಧಗಳು ಅವುಗಳನ್ನು ಅನ್ವಯ ಮಾಡಬಲ್ಲಷ್ಟರ ಮಟ್ಟಿಗೆ ಯಾವ ಅವಧಿಗಾಗಿ ಅವನನ್ನು ಬಂಧಿಸಿಡಲು ಅಥವಾ ಕಾರಾವಾಸದಲ್ಲಿಡಲು ಆದೇಶಿಸಲಾಗಿತ್ತೋ ಅಥವಾ ಶಿಕ್ಷಿಸಲಾಗಿತ್ತೋ ಆ ಅವಧಿಯು ಮುಕ್ತಾಯವಾದ ತರುವಾಯ (1)ನೇ ಉಪ–ಪ್ರಕರಣದ ಮೇರೆಗೆ ಮಾನಸಿಕ ರೋಗಿಗಳ ಆಸ್ಪತ್ರೆ ಅಥವಾ ಸುರಕ್ಷಾ ಅಭಿರಕ್ಷೆಯ ಇತರ ಸ್ಥಳದಲ್ಲಿ ಬಂಧಿಸಿಡಲಾದ ಪ್ರತಿಯೊಬ್ಬ ವ್ಯಕ್ತಿಗೆ, ಅನ್ವಯವಾಗತಕ್ಕದ್ದು. ಮತ್ತು ಆ ಉಪ–ಪ್ರಕರಣದ ಮೇರೆಗೆ ಮಾನಸಿಕ ರೋಗಿಗಳ ಆಸ್ಪತ್ರೆ ಅಥವಾ ಸುರಕ್ಷಾ ಅಭಿರಕ್ಷೆಯ ಇತರ ಸ್ಥಳದಲ್ಲಿ ಬಂದಿಯನ್ನು ಬಂಧಿಸಿಟ್ಟಂಥ ಕಾಲವನ್ನು ನ್ಯಾಯಾಲಯವು, ಅವನು ಅನುಭವಿಸಲು ಆದೇಶಿಸಿರಬಹುದಾದ ಅಥವಾ ಶಿಕ್ಷಿಸಿರಬಹುದಾಗಿದ್ದಂಥ ಬಂಧನ ಅಥವಾ ಕಾರಾವಾಸದ ಅವಧಿಯ ಭಾಗವೆಂದು ಪರಿಗಣಿಸತಕ್ಕದ್ದು.

(4) ಯಾವ ಪ್ರಕರಣದಲ್ಲಿ ರಾಜ್ಯ ಸರ್ಕಾರವು (1)ನೇ ಉಪ–ಪ್ರಕರಣದ ಮೇರೆಗೆ ಬಂದಿಯನ್ನು ಮಾನಸಿಕ ರೋಗಿಗಳ ಆಸ್ಪತ್ರೆ ಅಥವಾ ಕರ್ನಾಟಕ ರಾಜ್ಯದಲ್ಲಿನ ಸುರಕ್ಷಾ ಅಭಿರಕ್ಷೆಯ ಇತರ ಸ್ಥಳಕ್ಕೆ ಸ್ಥಳಾಂತರಣಕ್ಕೆ ಆದೇಶಿಸಲು ಸಕ್ಷಮವಾಗಿರುವುದೋ ಆ ಯಾವುದೇ ಪ್ರಕರಣದಲ್ಲಿ, ರಾಜ್ಯ ಸರ್ಕಾರವು ಯಾವುದೇ ಇತರ ರಾಜ್ಯದಲ್ಲಿನ ಯಾವುದೇ ಅಂಥ ಆಸ್ಪತ್ರೆ ಅಥವಾ ಸ್ಥಳಕ್ಕೆ ಅಂಥ ಇತರ ರಾಜ್ಯದ ಸರ್ಕಾರದೊಂದಿಗೆ ಒಪ್ಪಂದದ ಮೂಲಕ ಅವನ ಸ್ಥಳಾಂತರಣವನ್ನು ಆದೇಶಿಸಬಹುದು ಮತ್ತು (1)ನೇ

ಉಪಪ್ರಕರಣದ ಮೇರೆಗೆ ಸ್ಥಳಾಂತರಿಸಿದ ಬಂದಿಯ ಅಭಿರಕ್ಷೆ, ಬಂಧನ ಮತ್ತು ವಿಮೋಚನೆಗೆ ಸಂಬಂಧಿಸಿದಂತೆ ಈ ಪ್ರಕರಣದ ಉಪಬಂಧಗಳು ಅವುಗಳನ್ನು ಅನ್ವಯ ಮಾಡಬಲ್ಲಷ್ಟರ ಮಟ್ಟಿಗೆ ಈ ಉಪ–ಪ್ರಕರಣದ ಮೇರೆಗೆ ಸ್ಥಳಾಂತರಿಸಿದ ಬಂದಿಗೆ ಅನ್ವಯವಾಗತಕ್ಕದ್ದು.

**10. ಆಜೀವ ಕಾರಾವಾಸದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿಗಳ ಬಂಧನಕ್ಕಾಗಿ ಸ್ಥಳಗಳನ್ನು ಗೊತ್ತುಪಡಿಸುವುದು ಮತ್ತು ಅಲ್ಲಿಗೆ ಸ್ಥಳಾಂತರಣ.–**

(1) ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ಯಾವ ಸ್ಥಳಗಳಿಗೆ ಆಜೀವ ಕಾರಾವಾಸದ ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಗಳನ್ನು ಕಳುಹಿಸತಕ್ಕದ್ದೋ ಆ ಸ್ಥಳಗಳನ್ನು ಗೊತ್ತುಪಡಿಸಬಹುದು ಮತ್ತು ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು ಇನ್ನೊಂದು ಅಪರಾಧಕ್ಕಾಗಿ ಹಿಂದೆ ವಿಧಿಸಿದ ಶಿಕ್ಷೆಯ ಮೇರೆಗೆ ಆಜೀವ ಕಾರಾವಾಸ ಶಿಕ್ಷೆಯನ್ನು ಇಗಾಗಲೇ ಅನುಭವಿಸುತ್ತಿರುವ ವ್ಯಕ್ತಿಗೆ, ಆಜೀವ ಕಾರಾವಾಸದ ಶಿಕ್ಷೆಯನ್ನು ವಿಧಿಸಿದಾಗ ಹೊರತು ಹಾಗೆ ಗೊತ್ತುಪಡಿಸಿದ ಸ್ಥಳಕ್ಕೆ ಅಂಥ ವ್ಯಕ್ತಿಯ ಸ್ಥಳಾಂತರಣಕ್ಕಾಗಿ ಆದೇಶವನ್ನು ಕೊಡತಕ್ಕದ್ದು.

(2) ಯಾವ ಪ್ರಕರಣದಲ್ಲಿ ರಾಜ್ಯ ಸರ್ಕಾರವು (1)ನೇ ಉಪ–ಪ್ರಕರಣದ ಮೇರೆಗೆ ರಾಜ್ಯದೊಳಗೆ ಸ್ಥಳಗಳನ್ನು ಗೊತ್ತುಪಡಿಸಲು ಮತ್ತು ಆಜೀವ ಕಾರಾವಾಸ ಶಿಕ್ಷೆಗೆ ಒಳಪಟ್ಟಿರುವ ವ್ಯಕ್ತಿಗಳನ್ನು ಅಲ್ಲಿಗೆ ಸ್ಥಳಾಂತರಿಸಲು ಆದೇಶಿಸಲು ಸಕ್ಷಮವಾಗಿರುವುದೋ ಆ ಆವುದೇ ಪ್ರಕರಣದಲ್ಲಿ, ರಾಜ್ಯ ಸರ್ಕಾರವು ಯಾವುದೇ ಇತರ ರಾಜ್ಯದಲ್ಲಿ ಅಂಥ ರಾಜ್ಯ ಸರ್ಕಾರದೊಂದಿಗೆ ಒಪ್ಪಂದದ ಮೂಲಕ ಅಂಥ ಸ್ಥಳಗಳನ್ನು ಗೊತ್ತುಪಡಿಸಬಹುದು ಮತ್ತು ಅಂಥದೇ ಒಪ್ಪಂದದ ಮೂಲಕ ಅಂಥ ವ್ಯಕ್ತಿಗಳನ್ನು ಅಲ್ಲಿಗೆ ಸ್ಥಳಾಂತರಿಸುವುದಕ್ಕಾಗಿ ಆದೇಶಗಳನ್ನು ಕೊಡಬಹುದು ಅಥವಾ ಆದೇಶಗಳನ್ನು ಕೊಡಲು ಯಾವನೇ ಅಧಿಕಾರಿಯನ್ನು ಕ್ರಮಬದ್ಧವಾಗಿ ಅಧಿಕೃತಗೊಳಿಸಬಹುದು.

**11. ಕ್ಷಮಿಸುವುದಕ್ಕಾಗಿ ಶಿಫಾರಸ್ಸು ಮಾಡಿದ ಬಂದಿಯನ್ನು ಉಚ್ಚ ನ್ಯಾಯಾಲಯದ ಆದೇಶದ ಮೂಲಕ ಮುಚ್ಚಳಿಕೆಯ ರೀತಿ ಬಿಡುಗಡೆ.–** ಉಚ್ಚ ನ್ಯಾಯಾಲಯವು, ಯಾವ ಪ್ರಕರಣದಲ್ಲಿ ಯಾವನೇ ಬಂದಿಗೆ ಮುಕ್ತ ಕ್ಷಮೆಯನ್ನು ಕೊಡಲು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೋ ಆ ಯಾವುದೇ ಪ್ರಕರಣದಲ್ಲಿ ಅವನದೇ ಆದ ಮುಚ್ಚಳಿಕೆಯ ಮೇಲೆ ಅವನು ಸ್ವತಂತ್ರನಾಗಿರಲು ಅನುಮತಿಸಬಹುದು.

**12. ನಿರಸನ ಮತ್ತು ಉಳಿಸುವಿಕೆಗಳು.–** ಮುಂಬೈ ಪ್ರದೇಶ, ಮದ್ರಾಸ್ ಪ್ರದೇಶ ಮತ್ತು ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿರುವ ಬಂದಿಗಳ ಅಧಿನಿಯಮ, 1900 (ಕೇಂದ್ರ ಅಧಿನಿಯಮ 1900ರ III) ಹೈದರಾಬಾದ್ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಹೈದರಾಬಾದ್ ಬಂದಿಗಳ ಅಧಿನಿಯಮ 1954 (ಹೈದರಾಬಾದ್ ಅಧಿನಿಯಮ 1954ರ XXV) ಮತ್ತು ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮೈಸೂರು ಬಂದಿಗಳ ವರ್ಗಾವಣೆ ಅಧಿನಿಯಮ, 1954ರ (ಮೈಸೂರು ಅಧಿನಿಯಮ 1954ರ XXXIV) ಮತ್ತು ಮೈಸೂರು ಕಾನೂನುಗಳ ಅಳವಡಿಕೆ ಆದೇಶ, 1956ರ ಮೂಲಕ ಅಳವಡಿಸಿದಂತೆ ಮೈಸೂರು ಕಾರಾಗೃಹಗಳ ಅಧಿನಿಯಮ, 1943 (ಮೈಸೂರು ಅಧಿನಿಯಮ, 1943ರ XXXIV) ದ 57ನೇ ಪ್ರಕರಣ ಇವುಗಳನ್ನು ಈ ಮೂಲಕ ನಿರಸನಗೊಳಿಸಿದೆ :

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ 1899ರ 6ನೇ ಪ್ರಕರಣವು (ಕರ್ನಾಟಕ ಅಧಿನಿಯಮ 1899ರ III) ಅಂಥ ನಿರಸನಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8ನೇ ಪ್ರಕರಣ ಮತ್ತು 24ನೇ ಪ್ರಕರಣವು ಸದರಿ ಅಧಿನಿಯಮಿತಿಗಳನ್ನು ನಿರಸನಗೊಳಿಸಲಾಗಿದ್ದಿದ್ದರೆ ಮತ್ತು ಈ ಅಧಿನಿಯಮದ ಮೂಲಕ ಪುನಃ ಅಧಿನಿಯಮಿತಿಗೊಳಿಸಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**ಪಿ. ವೆಂಕಟಸುಬ್ಬಯ್ಯ**
ಕರ್ನಾಟಕ ರಾಜ್ಯಪಾಲರು

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ
ಹೆಸರಿನಲ್ಲಿ,

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಪ್ರಕಟಣೆಗಳು).